ಕರ್ನಾಟಕ ಸರ್ಕಾರ

# ಲೋಕ ಶಿಕ್ಷಣ ನಿರ್ದೇಶನಾಲಯ,

## 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03

# 2017–18 ನೇ ಸಾಲಿನ ವಾರ್ಷಿಕ ಆಡಳಿತ ವರದಿ

**ಕರ್ನಾಟಕ ಸರ್ಕಾರ**

**ಲೋಕ ಶಿಕ್ಷಣ ನಿರ್ದೇಶನಾಲಯ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003**

## 1) ಲೋಕ ಶಿಕ್ಷಣ ನಿರ್ದೇಶನಾಲಯದ ಸಂಕ್ಷಿಪ್ತ ಮಾಹಿತಿ

ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಯಸ್ಕರ ಶಿಕ್ಷಣ ನಿರ್ದೇಶನಾಲಯವು 1978-79ರಲ್ಲಿ ಸ್ಥಾಪನೆಯಾಯಿತು. 1988-89ರಲ್ಲಿ ವಯಸ್ಕರ ಶಿಕ್ಷಣ ನಿರ್ದೇಶನಾಲಯವನ್ನು ಲೋಕ ಶಿಕ್ಷಣ ನಿರ್ದೇಶನಾಲಯ ಎಂದು ಮರು ನಾಮಕರಣ ಮಾಡಲಾಯಿತು. ನಿರ್ದೇಶನಾಲಯವು ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಜಿಲ್ಲಾ/ತಾಲ್ಲೂಕು/ಗ್ರಾಮ ಸಾಕ್ಷರತಾ ಸಮಿತಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದೆ. ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಾದ ನಿರ್ದೇಶನ, ಮಾರ್ಗಸೂಚಿ, ಪರಿವೀಕ್ಷಣೆ ಮತ್ತು ತರಬೇತಿಯನ್ನು ನಿರ್ದೇಶನಾಲಯದಿಂದ ನೀಡಲಾಗುತ್ತಿದೆ. ನಿರ್ದೇಶನಾಲಯಕ್ಕೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮಗಳು ಇಲ್ಲದೇ ಇರುವುದರಿಂದ ಪ್ರಮುಖವಾಗಿ ಅಗತ್ಯವಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಮಂಡಳಿ ಹಾಗೂ ಇತರೆ ಇಲಾಖೆಗಳಿಂದ ನಿಯೋಜನೆ ಮೇರೆಗೆ ಪಡೆದು ಇಲಾಖೆಯ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ.

### ಹುದ್ದೆಗಳ ರಚನಾ ಸೂಚಿ



## ಲೋಕ ಶಿಕ್ಷಣ ನಿರ್ದೇಶನಾಲಯಕ್ಕೆ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ
## (ಮಾರ್ಚ್2018 ರ ಅಂತ್ಯದಲ್ಲಿದ್ದಂತೆ)

| ಕ್ರ. ಸಂ. | ಜಿಲ್ಲೆಯ ಹೆಸರು | 1ನೇ ದರ್ಜೆ | | | 2ನೇ ದರ್ಜೆ | | | 3ನೇ ದರ್ಜೆ | | | 4ನೇ ದರ್ಜೆ | | |
|---|---|---|---|---|---|---|---|---|---|---|---|---|---|
| | | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
| 1 | ಬೆಂಗಳೂರು(ಗ್ರಾ) | 1 | 1 | 0 | 0 | 0 | 0 | 2 | 1 | 1 | 1 | 0 | 1 |
| 2 | ಬೆಳಗಾಂ | 1 | 1 | 0 | 0 | 0 | 0 | 2 | 2 | 0 | 1 | 1 | 0 |
| 3 | ಬಳ್ಳಾರಿ | 1 | 1 | 0 | 0 | 0 | 0 | 2 | 2 | 0 | 1 | 0 | 1 |
| 4 | ಬಿಜಾಪುರ | 1 | 0 | 1 | 0 | 0 | 0 | 2 | 2 | 0 | 1 | 1 | 0 |
| 5 | ಬೀದರ | 1 | 0 | 1 | 0 | 0 | 0 | 2 | 2 | 0 | 1 | 1 | 0 |
| 6 | ಚಿಕ್ಕಮಗಳೂರು | 1 | 1 | 0 | 0 | 0 | 0 | 2 | 1 | 1 | 1 | 1 | 0 |
| 7 | ಚಿತ್ರದುರ್ಗ | 1 | 0 | 1 | 0 | 0 | 0 | 2 | 2 | 0 | 1 | 0 | 1 |
| 8 | ದಕ್ಷಿಣ ಕನ್ನಡ | 1 | 1 | 0 | 0 | 0 | 0 | 2 | 1 | 1 | 1 | 0 | 1 |
| 9 | ಧಾರವಾಡ | 1 | 1 | 0 | 0 | 0 | 0 | 2 | 2 | 0 | 1 | 1 | 0 |
| 10 | ಗುಲ್ಬರ್ಗಾ | 1 | 1 | 0 | 0 | 0 | 0 | 2 | 2 | 0 | 1 | 1 | 0 |
| 11 | ಹಾಸನ | 1 | 1 | 0 | 0 | 0 | 0 | 2 | 0 | 2 | 1 | 0 | 1 |
| 12 | ಕೊಡಗು | 1 | 0 | 1 | 0 | 0 | 0 | 2 | 0 | 2 | 1 | 0 | 1 |
| 13 | ಕೋಲಾರ | 1 | 1 | 0 | 0 | 0 | 0 | 2 | 2 | 0 | 1 | 1 | 0 |
| 14 | ಮಂಡ್ಯ | 1 | 1 | 0 | 0 | 0 | 0 | 2 | 2 | 0 | 1 | 1 | 0 |
| 15 | ಮೈಸೂರು | 1 | 1 | 0 | 0 | 0 | 0 | 3 | 3 | 0 | 1 | 1 | 0 |
| 16 | ರಾಯಚೂರು | 1 | 1 | 0 | 0 | 0 | 0 | 2 | 2 | 0 | 1 | 0 | 1 |
| 17 | ಶಿವಮೊಗ್ಗ | 1 | 0 | 1 | 0 | 0 | 0 | 3 | 3 | 0 | 1 | 0 | 1 |
| 18 | ತುಮಕೂರು | 1 | 1 | 0 | 0 | 0 | 0 | 2 | 2 | 0 | 1 | 0 | 1 |
| 19 | ಉತ್ತರ ಕನ್ನಡ | 1 | 0 | 1 | 0 | 0 | 0 | 2 | 0 | 2 | 1 | 0 | 1 |
| 20 | ಚಾಮರಾಜನಗರ | 1 | 1 | 0 | 0 | 0 | 0 | 2 | 1 | 1 | 1 | 0 | 1 |
| 21 | ದಾವಣಗೆರೆ | 1 | 1 | 0 | 0 | 0 | 0 | 2 | 1 | 1 | 1 | 0 | 1 |
| **22** | **ಗದಗ** | **1** | **0** | **1** | 0 | 0 | 0 | 2 | 2 | 0 | **1** | **1** | **0** |
| **23** | **ಹಾವೇರಿ** | **1** | **0** | **1** | 0 | 0 | 0 | 2 | 2 | 0 | **1** | **1** | **0** |
| **24** | **ಬಾಗಲಕೋಟೆ** | **1** | **1** | **0** | 0 | 0 | 0 | 2 | 2 | 0 | **1** | **1** | **0** |
| 25 | ಉಡುಪಿ | 1 | 0 | 1 | 0 | 0 | 0 | 2 | 0 | 2 | 1 | 0 | 1 |
| **26** | **ಕೊಪ್ಪಳ** | **1** | **1** | **0** | 0 | 0 | 0 | 2 | 1 | 1 | **1** | **1** | **0** |
| 27 | ರಾಮನಗರ | 1 | 1 | 0 | 0 | 0 | 0 | 2 | 1 | 1 | 1 | 0 | 1 |
| 28 | ಯಾದಗಿರಿ | 1 | 1 | 0 | 0 | 0 | 0 | 2 | 2 | 0 | 1 | 0 | 1 |
| 29 | ಚಿಕ್ಕಬಳ್ಳಾಪುರ | 1 | 1 | 0 | 0 | 0 | 0 | 2 | 0 | 2 | 1 | 0 | 1 |
| 30 | ಬೆಂಗಳೂರು ನಗರ | 1 | 1 | 0 | 0 | 0 | 0 | 2 | 0 | 2 | 1 | 0 | 1 |
| 31 | ಮಧುಗಿರಿ | 1 | 1 | 0 | 0 | 0 | 0 | 2 | 1 | 1 | 1 | 0 | 1 |
| 32 | ಚಿಕ್ಕೋಡಿ | 1 | 0 | 1 | 0 | 0 | 0 | 2 | 1 | 1 | 1 | 1 | 0 |
| **ಜಿಲ್ಲೆಗಳು** | | **32** | **22** | **10** | **0** | **0** | **0** | **66** | **45** | **21** | **32** | **14** | **18** |
| ನಿರ್ದೇಶನಾಲಯ | | 8 | 8 | 0 | 2 | 1 | 1 | 17 | 6 | 11 | 4 | 0 | 4 |
| **ಒಟ್ಟು ಹುದ್ದೆಗಳು** | | **40** | **30** | **10** | **2** | **1** | **1** | **83** | **51** | **32** | **36** | **14** | **22** |

## ಲೋಕ ಶಿಕ್ಷಣ ನಿರ್ದೇಶನಾಲಯದಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರ ವಿವರ

| ಕ್ರ ಸಂ | ಹುದ್ದೆಗಳ ವಿವರ | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ |
|---|---|---|
| 1 | ಇ–ಆಡಳಿತ ವಿಭಾಗ– ಕಂಪ್ಯೂಟರ್ ಪ್ರೋಗ್ರಾಮರ್ | 01 |
| 2 | ಶೀಘ್ರಲಿಪಿಗಾರರು | 01 |
| 3 | ಇ–ಆಡಳಿತ ವಿಭಾಗ– ಡಾಟಾ ಎಂಟ್ರಿ ಆಪರೇಟರ್ | 01 |
| 4 | ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯ ಮಟ್ಟದ ಸಂಯೋಜಕರು | 01 |
| 5 | ಸಾಕ್ಷರ ಭಾರತ್ ಕಾರ್ಯಕ್ರಮದ ದಾಖಲೀಕರಣ ನಿರ್ವಾಹಕರು | 01 |
| 6 | ಸಾಕ್ಷರ ಭಾರತ್ ಕಾರ್ಯಕ್ರಮದ ಲೆಕ್ಕ ನಿರ್ವಾಹಕರು | 01 |
| 7 | ಸಮಾಲೋಚಕರು | 01 |
| 8 | ವಾಹನ ಚಾಲಕರು | 01 |
| 9 | ಭದ್ರತಾ ಸಿಬ್ಬಂದಿ | 03 |

## 2017-18ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ಬಿಡುಗಡೆಯಾಗಿರುವ, ಮಂಜೂರಾಗಿರುವ ಅನುದಾನದ ಭೌತಿಕ ಮತ್ತು ಆರ್ಥಿಕ ಪ್ರಗತಿ

| ಕ್ರ ಸಂ | ಲೆಕ್ಕ ಶೀರ್ಷಿಕೆ | | ಯೋಜನೆ | | | | | | ಯೋಜನೇತರ | |
|---|---|---|---|---|---|---|---|---|---|---|
| | | | ಆರ್ಥಿಕ | | ಭೌತಿಕ | | | | ಆರ್ಥಿಕ | |
| | | ಪ್ರಾರಂಭಿಕ ಶಿಲ್ಕು | ಮಂಜೂರಾತಿ/ ಬಿಡುಗಡೆ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) | ಕಾರ್ಯಕ್ರಮಗಳು | ಗುರಿ | ದಾಖಲಾತಿ | ಕಲಿಕೆ ಭಾಗ-3/ ತರಬೇತಿ ಪೂರ್ಣಗೊಳಿಸಿದವರು | ಮಂಜೂರಾತಿ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
| **1** | **2** | | **3** | **4** | **5** | **6** | **7** | **8** | **9** | **10** |
| 1 | ಹೈದರಾಬಾದ್-ಕರ್ನಾಟಕ 06 ಜಿಲ್ಲೆಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ಅನುಷ್ಠಾನ 2202-04-001-0-05-103 ಸಾಮಾನ್ಯ | 1352.00 ** | *380.00 | 1252.44 | ಹೈದರಾಬಾದ್-ಕರ್ನಾಟಕ 06 ಜಿಲ್ಲೆಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ಅನುಷ್ಠಾನ | 415800 | 335387 | 314559 | 0 | 0 |
| 2 | 2202-04-001-0-05-422 ವಿಶೇಷ ಘಟಕ ಯೋಜನೆ (ಎಸ್‌ಸಿಪಿ) | 390.00 ** | *300.00 | 361.45 | ವಿಶೇಷ ಘಟಕ ಯೋಜನೆ-(ಸಾಕ್ಷರ ಭಾರತ್) | 120000 | 166980 | 175055 | 0 | 0 |
| 3 | 2202-04-001-0-05-423 ಗಿರಿಜನ ಉಪ ಯೋಜನೆ (ಟಿಎಸ್‌ಪಿ) | 209.00 ** | *70.00 | 193.38 | ಗಿರಿಜನ ಉಪಯೋಜನೆ-(ಸಾಕ್ಷರ ಭಾರತ್) | 64200 | 97633 | 100934 | 0 | 0 |
| | **ಒಟ್ಟು** | **1951.00** | **750.00** | **1807.27** | **ಒಟ್ಟು** | **600000** | **600000** | **590548** | **0** | **0** |
| 4 | 2202-04-001-0-01 ನಿರ್ದೇಶನಾಲಯದ ಅಧಿಕಾರಿ ಮತ್ತು ಸಿಬ್ಬಂದಿ ವೇತನ | 0 | 0 | 0 | ಅಧಿಕಾರಿ ಮತ್ತು ಸಿಬ್ಬಂದಿ ವೇತನ | - | - | - | 152.00 | 107.06 |
| 5 | ಆಡಳಿತ ಬಲವರ್ಧನೆ | 0 | 0 | 0 | ರಾಜ್ಯ ಮಟ್ಟದ ಆಡಳಿತ ಬಲವರ್ಧನೆ | - | - | - | 50.00 | 31.19 |
| 6 | 2202-04-001-0-02-101 ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಸಹಾಯನುದಾನ | 0 | 0 | 0 | ವೇತನ ಮತ್ತು ಇತರೆ | - | - | - | 248.00 *** | 242.90 |
| 7 | 2202-04-001-0-02-059 ರಾಜ್ಯ ಮಟ್ಟದ ಸಾಕ್ಷರತಾ ಕಾರ್ಯಕ್ರಮಗಳು | 0 | 0 | 0 | ವಿದ್ಯಾಪೀಠಗಳ ತರಬೇತಿ ಮತ್ತು ನಿರ್ವಹಣೆ | - | - | - | 99.00 **** | 19.00 |
| | **ಒಟ್ಟು** | **1951.00** | **750.00** | **1807.27** | **ಒಟ್ಟು** | **600000** | **600000** | **590548** | **549.00** | **400.15** |

**ಟಿಪ್ಪಣಿ:** 1. * 2017-18ನೇ ಸಾಲಿನ ಆಯವ್ಯಯದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಿನ ಅನುದಾನವಾಗಿ ರೂ.750.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದುಸ ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017, ದಿನಾಂಕ:29.05.2017ರಲ್ಲಿ ಹೈದರಾಬಾದ್-ಕರ್ನಾಟಕದ 06 ಜಿಲ್ಲೆಗಳಲ್ಲಿ 6.00 ಲಕ್ಷ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಲು ರೂ.22.00 ಲಕ್ಷಗಳ ಅಂದಾಜಿಗೆ ಅನುಮೋದನೆ ನೀಡಿ ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ ಉಳಿದ 19.51 ಕೋಟಿ ಹಣವನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊಬಲಗಿನ ಬಳಕೆಗೆ ಮೊದಲು ಉಪಯೋಗಿಸಿಕೊಳ್ಳಲು ನಿರ್ದೇಶಿಸಲಾಗಿದೆ. ಅದರಂತೆ ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊಬಲಗು ರೂ.750.00 ಲಕ್ಷಗಳನ್ನು 2017-18ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವುದಿಲ್ಲ.

2. * * ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017, ದಿನಾಂಕ:29.05.2017ರಲ್ಲಿ ಹೈದರಾಬಾದ್-ಕರ್ನಾಟಕದ 06 ಜಿಲ್ಲೆಗಳಲ್ಲಿ 6.00 ಲಕ್ಷ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಲು ರೂ.22.00 ಲಕ್ಷಗಳ ಅಂದಾಜಿಗೆ ಅನುಮೋದನೆ ನೀಡಿ ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ ಉಳಿದ 19.51 ಕೋಟಿ ಹಣವನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊಬಲಗಿನ ಬಳಕೆಗೆ ಮೊದಲು ಉಪಯೋಗಿಸಿಕೊಳ್ಳಲು ನಿರ್ದೇಶಿಸಲಾಗಿದೆ.

3. *** ಸರ್ಕಾರದಿಂದ 2017-18ನೇ ಸಾಲಿಗೆ ವಿಸರ್ಜಿತ ವಯಸ್ಕರ ಶಿಕ್ಷಣ ಸಮಿತಿಯ ನೌಕರರ ವೇತನಕ್ಕಾಗಿ ರೂ.217.00

ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಕೊರತೆಯಾಗಿದ್ದ ರೂ.31.00 ಲಕ್ಷಗಳನ್ನು ವಿದ್ಯಾಪೀಠಗಳ ತರಬೇತಿಗೆ ಬಿಡಿಗಡೆಯಾಗಿದ್ದ ರೂ.130.00ಲಕ್ಷಗಳಲ್ಲಿ ಮರುಹೊಂದಾಣಿಕೆ ಮಾಡಿ ಬಿಡುಗಡೆ ಮಾಡಿದೆ.

4. **** ಸರ್ಕಾರದಿಂದ ರಾಜ್ಯ ಮಟ್ಟದ ಸಾಕ್ಷರತಾ ಕಾರ್ಯಕ್ರಮದಡಿ ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ವಿದ್ಯಾಪೀಠಗಳ ತರಬೇತಿ ಮತ್ತು ನಿರ್ವಹಣೆ ಸಲುವಾಗಿ ಒಟ್ಟು ರೂ.130.00 ಲಕ್ಷ ಬಿಡುಗಡೆಯಾಗಿದ್ದು, ರೂ.31.00 ಲಕ್ಷಗಳನ್ನು ವಿದ್ಯಾಪೀಠಗಳ ತರಬೇತಿಗೆ ಬಿಡಿಗಡೆಯಾಗಿದ್ದ ರೂ.130.00ಲಕ್ಷಗಳಲ್ಲಿ ಮರುಹೊಂದಾಣಿಕೆ ಮಾಡಿ ವೇತನಕ್ಕಾಗಿ ಬಿಡುಗಡೆ ಮಾಡಲಾಗಿದೆ. ತರಬೇತಿ ಕಾರ್ಯಕ್ರಮದ ಕ್ರಿಯಾಯೋಜನೆ ಅನುಮೋದನೆ ದೊರೆತಿಲ್ಲವಾದುದರಿಂದ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿರುವುದಿಲ್ಲ. ವಿದ್ಯಾಪೀಠಗಳ ಕಾವಲುಗಾರಿಕೆ, ಕಛೇರಿ ನಿರ್ವಹಣೆ ಇತ್ಯಾದಿ ಸಲುವಾಗಿರೂ.19.00 ಲಕ್ಷ ಮಾತ್ರ ಖಜಾನೆಯಿಂದ ಸೆಳೆದು ವೆಚ್ಚ ಭರಿಸಲಾಗಿದೆ. ಪ್ರಸ್ತುತ ಸರ್ಕಾರಿ ಆದೇಶ ಸಂಖ್ಯೆ: ಇಡಿ 103 ಪಿಟಿ 2017, ದಿನಾಂಕ:11.09.2017ರಂತೆ ಎಲ್ಲಾ ವಿದ್ಯಾಪೀಠಗಳನ್ನು ಕೌಶಲ್ಯಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ವರ್ಗಾಯಿಸಲಾಗಿದೆ.

## 2017–18ನೇ ಸಾಲಿನಲ್ಲಿ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗಿರುವ ವಿವಿಧ ಸಾಕ್ಷರತಾ ಕಾರ್ಯಕ್ರಮಗಳ ಪ್ರಗತಿ ವಿವರ

| ಕ್ರ. ಸಂ | ಕಾರ್ಯಕ್ರಮಗಳು | ಗುರಿ | ದಾಖಲಾತಿ | ಕಲಿಕೆ ಪೂರ್ಣಗೊಳಿಸಿದ ಕಲಿಕಾರ್ಥಿಗಳು |
|---|---|---|---|---|
| 1 | ಹೈದರಾಬಾದ್–ಕರ್ನಾಟಕ 06 ಜಿಲ್ಲೆಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ಅನುಷ್ಠಾನ ಸಾಮಾನ್ಯ | 415800 | 335387 | 314559 |
| 2 | ವಿಶೇಷ ಘಟಕ ಯೋಜನೆ ಅನುದಾನ: ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಾಗಿ ಬಳಕೆ | 120000 | 166980 | 175055 |
| 3 | ಗಿರಿಜನ ಉಪಯೋಜನೆ ಅನುದಾನ: ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಾಗಿ ಬಳಕೆ | 64200 | 97633 | 100934 |
| **ಒಟ್ಟು** | | **600000** | **600000** | **590548** |

**ಸಾಕ್ಷರ ಭಾರತ್ ಕಾರ್ಯಕ್ರಮ:**

2017–18ನೇ ಸಾಲಿನ ಆಯವ್ಯಯದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಿನ ಅನುದಾನವಾಗಿ ರೂ.750.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017, ದಿನಾಂಕ:29.05.2017ರಲ್ಲಿ ಹೈದರಾಬಾದ್–ಕರ್ನಾಟಕದ 06 ಜಿಲ್ಲೆಗಳಲ್ಲಿ 6.00 ಲಕ್ಷ ಅನಕ್ಷರಸ್ಥರನ್ನುಸಾಕ್ಷರಸ್ಥರನ್ನಾಗಿಸಲು ರೂ.22.00 ಲಕ್ಷಗಳ ಅಂದಾಜಿಗೆ ಅನುಮೋದನೆ ನೀಡಿ ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ ಉಳಿದ 19.51 ಕೋಟಿ ಹಣವನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊಬಲಗಿನ ಬಳಕೆಗೆ ಮೊದಲು ಉಪಯೋಗಿಸಿಕೊಳ್ಳಲು ನಿರ್ದೇಶಿಸಲಾಗಿದೆ. ಅದರಂತೆ ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊಬಲಗು ರೂ.750.00 ಲಕ್ಷಗಳನ್ನು 2017–18ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವುದಿಲ್ಲ.

**ಸಾಮಾನ್ಯ ವರ್ಗದ ಯೋಜನೆ:–** ಲೆಕ್ಕ ಶೀರ್ಷಿಕೆ 2202–04–001–0–05–103ರ ಅಡಿ ಪ್ರಾರಂಭಿಕ ಶಿಲ್ಕು ರೂ.1352.00 ಲಕ್ಷಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮಕ್ಕೆ ರೂ.1252.44 ಲಕ್ಷ ಬಳಕೆ ಮಾಡಲಾಗಿದೆ. ರಾಜ್ಯದ 06 ಜಿಲ್ಲೆಗಳಲ್ಲಿ 15+ ವಯೋಮಿತಿಯ ಸಾಮಾನ್ಯ ವರ್ಗದ ಗುರಿ 415800 ಇದ್ದು, 314559 ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಿದೆ. **(ಜಿಲ್ಲಾವಾರು ಪ್ರಗತಿ ವಿವರಗಳನ್ನು ಅನುಬಂಧ–1 ರಲ್ಲಿ ನಮೂದಿಸಿದೆ)**

**ವಿಶೇಷ ಘಟಕ ಯೋಜನೆ:–** ಲೆಕ್ಕ ಶೀರ್ಷಿಕೆ 2202–04–001–0–05–422 ರ ಅಡಿ ಪ್ರಾರಂಭಿಕ ಶಿಲ್ಕು ರೂ.390.00 ಲಕ್ಷಗಳಲ್ಲಿ, ರೂ. 361.45 ಲಕ್ಷಗಳನ್ನು ಸಾಕ್ಷರ ಭಾರತ್ ಕಾರ್ಯಕ್ರಮಕ್ಕೆ ಬಳಕೆ ಮಾಡಲಾಗಿದೆ. ರಾಜ್ಯದ 06 ಜಿಲ್ಲೆಗಳಲ್ಲಿ 15+ವಯೋಮಿತಿಯ ಪರಿಶಿಷ್ಠ ಜಾತಿಯ ಗುರಿ 120000 ಇದ್ದು, 175055 ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಿದೆ. **(ಜಿಲ್ಲಾವಾರು ಪ್ರಗತಿ ವಿವರಗಳನ್ನು ಅನುಬಂಧ–1 ರಲ್ಲಿ ನಮೂದಿಸಿದೆ)**

**ಗಿರಿಜನ ಉಪ ಯೋಜನೆ:–** ಲೆಕ್ಕ ಶೀರ್ಷಿಕೆ 2202–04–001–0–05–423 ರ ಅಡಿ ಪ್ರಾರಂಭಿಕ ಶಿಲ್ಕು ರೂ.209.00 ಲಕ್ಷಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮಕ್ಕೆ ರೂ.193.38 ಲಕ್ಷಗಳು ಬಳಕೆ ಮಾಡಲಾಗಿದೆ. ರಾಜ್ಯದ 06 ಜಿಲ್ಲೆಗಳಲ್ಲಿ 15+ ವಯೋಮಿತಿಯ ಪರಿಶಿಷ್ಠ ಪಂಗಡದ ಗುರಿ 64200 ಇದ್ದು, 100934 ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಿದೆ. **(ಜಿಲ್ಲಾವಾರು ಪ್ರಗತಿ ವಿವರಗಳನ್ನು ಅನುಬಂಧ–1 ರಲ್ಲಿ ನಮೂದಿಸಿದೆ)**

**ರಾಜ್ಯ ಸಾಕ್ಷರತಾ ಕಾರ್ಯಕ್ರಮ:–**

ಸರ್ಕಾರದಿಂದ ರಾಜ್ಯ ಮಟ್ಟದ ಸಾಕ್ಷರತಾ ಕಾರ್ಯಕ್ರಮದಡಿ ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ವಿದ್ಯಾಪೀಠಗಳ ತರಬೇತಿ ಮತ್ತು ನಿರ್ವಹಣೆ ಸಲುವಾಗಿ ಒಟ್ಟು ರೂ.130.00 ಲಕ್ಷ ಬಿಡುಗಡೆಯಾಗಿದ್ದು, ರೂ.31.00 ಲಕ್ಷಗಳನ್ನು ವಿದ್ಯಾಪೀಠಗಳ ತರಬೇತಿಗೆ ಬಿಡಿಗಡೆಯಾಗಿದ್ದ ರೂ.130.00ಲಕ್ಷಗಳಲ್ಲಿ ಮರುಹೊಂದಾಣಿಕೆ ಮಾಡಿ ವೇತನಕ್ಕಾಗಿ ಬಿಡುಗಡೆ ಮಾಡಲಾಗಿದೆ. ತರಬೇತಿ ಕಾರ್ಯಕ್ರಮದ ಕ್ರಿಯಾಯೋಜನೆ ಅನುಮೋದನೆ ದೊರೆತಿಲ್ಲವಾದುದರಿಂದ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿರುವುದಿಲ್ಲ. ವಿದ್ಯಾಪೀಠಗಳ ಕಾವಲುಗಾರಿಕೆ, ಕಛೇರಿ ನಿರ್ವಹಣೆ ಇತ್ಯಾದಿ ಸಲುವಾಗಿರೂ.19.00 ಲಕ್ಷ ಮಾತ್ರ ಖಜಾನೆಯಿಂದ ಸೆಳೆದು ವೆಚ್ಚ ಭರಿಸಲಾಗಿದೆ. ಪ್ರಸ್ತುತ ಸರ್ಕಾರಿ ಆದೇಶ ಸಂಖ್ಯೆ: ಇಡಿ 103 ಪಿಟಿ 2017, ದಿನಾಂಕ:11.09.2017ರಂತೆ ಎಲ್ಲಾ ವಿದ್ಯಾಪೀಠಗಳನ್ನು ಕೌಶಲ್ಯಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ವರ್ಗಾಯಿಸಲಾಗಿದೆ.

ಲೆಕ್ಕ ಶೀರ್ಷಿಕೆ 2202–04–001–0–02 ಇತರೆ 059 ಅಡಿಯಲ್ಲಿ ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ವಿದ್ಯಾಪೀಠಗಳ ತರಬೇತಿ ಮತ್ತು ನಿರ್ವಹಣೆಯ ಸಲುವಾಗಿ ರೂ.99.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ವಿದ್ಯಾಪೀಠಗಳ ಕಾವಲುಗಾರಿಕೆ ಮತ್ತು ನಿರ್ವಹಣೆಗಾಗಿ ಈವರೆವಿಗೆ ರೂ.19.00 ಲಕ್ಷಗಳ ಅನುದಾನವನ್ನು ಖಜಾನೆಯಿಂದ ಸೆಳೆದು ವೆಚ್ಚ ಭರಿಸಲಾಗಿದೆ.

**ಹೈದರಾಬಾದ್–ಕರ್ನಾಟಕ 06 ಜಿಲ್ಲೆಗಳಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ಅನುಷ್ಠಾನ**

- ಸಾಕ್ಷರ ಭಾರತ್ ಕಾರ್ಯಕ್ರಮವು – ಮೂಲ ಸಾಕ್ಷರತೆ, ಸಮಾನ ಶಿಕ್ಷಣ, ವೃತ್ತಿ ಕೌಶಲ ಮತ್ತು ಮುಂದುವರಿಕೆ ಶಿಕ್ಷಣವನ್ನೊಳಗೊಂಡ ಸಮಗ್ರ ಕಾರ್ಯಕ್ರಮ.
- **ಗುರಿ**: 15+ ವಯೋಮಿತಿಯ 6.00 ಲಕ್ಷ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸುವುದು.
- **ಅವಧಿ**: 2018 ಮಾರ್ಚ್ ಅಂತ್ಯಕ್ಕೆ ಶೇಕಡ 80ರ ಸಾಕ್ಷರತಾ ಪ್ರಮಾಣವನ್ನು ಸಾಧಿಸುವುದು.
- 2017–18ನೇ ಸಾಲಿನ ಕಲಿಕೆಗೆ ಹೈದರಾಬಾದ್–ಕರ್ನಾಟಕ ಪ್ರದೇಶದ 06 ಜಿಲ್ಲೆಗಳಿಗೆ ಸಾಕ್ಷರ ಭಾರತ್ ಕಾರ್ಯಕ್ರಮ ಮಂಜೂರಾಗಿದ್ದು 31 ತಾಲ್ಲೂಕುಗಳು ಮತ್ತು 999 ಗ್ರಾಮ ಪಂಚಾಯಿತಿಗಳು ಕಾರ್ಯಕ್ರಮದ ವ್ಯಾಪ್ತಿಗೊಳಪಡುತ್ತವೆ.
- ನಾಲ್ಕನೇ ಹಂತದ ಕಲಿಕೆಗೆ 6.00 ಲಕ್ಷಗಳ ಗುರಿ ಹೊಂದಿದ್ದು, 06 ಜಿಲ್ಲೆ, 31 ತಾಲ್ಲೂಕು, 999 ಗ್ರಾಮ ಪಂಚಾಯಿತಿಗಳಲ್ಲಿ 6.00 ಲಕ್ಷ ಕಲಿಕಾರ್ಥಿಗಳು ಕಲಿಕೆಗೆ ಒಳಪಟ್ಟಿರುತ್ತಾರೆ.
- ಕಾರ್ಯಕ್ರಮದ ಪ್ರಾರಂಭದಲ್ಲಿ ಅನುದಾನವನ್ನು ಶೇ 75:25 ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸುವುದಾಗಿದ್ದು ಪ್ರಸ್ತುತ ಅನುದಾನದ ಭಾಗಾಂಶವನ್ನು 60:40 ಕ್ಕೆ ಪರಿಷ್ಕರಿಸಲಾಗಿದೆ.

### ಸಾಕ್ಷರ ಭಾರತ್ ಕಾರ್ಯಕ್ರಮಕ್ಕೆ ವರ್ಷಾವಾರು ಬಿಡುಗಡೆಯಾದ ಅನುದಾನದ ವಿವರ (ಮಾರ್ಚ್ 2018ರ ಅಂತ್ಯಕ್ಕೆ)

| ಕ್ರ ಸಂ | ವರ್ಷ | ಹಂತ | ಎನ್‌ಎಲ್‌ಎಂಎ ಯಿಂದ ಮಂಜೂರಾದ ಆದೇಶ ಸಂಖ್ಯೆ ಮತ್ತು ದಿನಾಂಕ | ಜಿಲ್ಲೆಗಳ ವಿವರ | ಮಂಜೂರಾದ ಅನುದಾನ | ಕೇಂದ್ರದ ಪಾಲು | ರಾಜ್ಯದ ಪಾಲು |
|---|---|---|---|---|---|---|---|
| 1 | 2009–10 | ಮೊದಲನೇ ಹಂತ | **ಎಫ್18–1/2009/**NLM A-II/ ದಿನಾಂಕ **24.12.2009** | **16** ಜಿಲ್ಲೆಗಳಿಗೆ ಮೊದಲನೆ ಕಂತು | 24,59,21,700 | 18,44,41,275 | 6,14,80,425 |
| | | | ಒಟ್ಟು | | **24,59,21,700** | **18,44,41,275** | **6,14,80,425** |
| 2 | 2010–11 | ಎರಡನೇ ಹಂತ | **ಎಫ್18–11/2009/NLM A-II/** ದಿನಾಂಕ **16.12.2010** | ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಿಗೆ ಮೊದಲನೆ ಕಂತು | 4,93,10,482 | 3,69,82,862 | 1,23,27,620 |
| | | ಮೊದಲನೇ ಹಂತ | **ಎಫ್18–1/2009/NLMA-II/** ದಿನಾಂಕ **14.03.2011** | **16** ಜಿಲ್ಲೆಗಳಿಗೆ ಎರಡನೆ ಕಂತು | **55,90,78,704** | **41,93,09,028** | **13,97,69,676** |
| | | | ಒಟ್ಟು | | **60,83,89,186** | **45,62,91,890** | **15,2097,296** |
| 3 | 2011–12 | ಮೊದಲನೇ ಮತ್ತು ಎರಡನೇ ಹಂತ | – | – | – | – | – |
| 4 | 2012–13 | ಮೊದಲನೇ ಹಂತ | **ಎಫ್18–1/2009/NLMA-II/** ದಿನಾಂಕ **21.09.2012** | **16** ಜಿಲ್ಲೆಗಳಿಗೆ ಮೂರನೇ ಕಂತು | 48,18,31,407 | 36,13,73,555 | 12,04,57,852 |
| | | ಎರಡನೇ ಹಂತ | **ಎಫ್18–11/2010/NLMA-II/** ದಿನಾಂಕ **21.09.2012** | ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಿಗೆ ಎರಡನೆ ಕಂತು | **5,30,27,496** | **3,97,70,622** | **1,32,56,874** |
| | | ಒಟ್ಟು | | | **53,48,58,903** | **40,11,44,177** | **13,37,14,726** |
| 5 | 2013–14 | ಮೊದಲನೇ ಮತ್ತು ಎರಡನೇ ಹಂತ | **ಎಫ್18–1/2014/**NLM A-II/ ದಿನಾಂಕ **28.02.2014** | ಸಾಕ್ಷರ ಭಾರತ್ ಕಾರ್ಯಕ್ರಮದ ಎಲ್ಲಾ ಜಿಲ್ಲೆಗಳಿಗೆ | 21,00,26,000 | 15,75,19,500 | 5,25,06,500 |
| | | ಒಟ್ಟು | | | **21,00,26,000** | **15,75,19,500** | **5,25,06,500** |

| | | | | | | | |
|---|---|---|---|---|---|---|---|
| 6 | 2014–15 | ಮೊದಲನೇ ಮತ್ತು ಎರಡನೇ ಹಂತ | ಎಫ್18–1/2014/NLM A-II/ ದಿನಾಂಕ 13.02.2015 | ಸಾಕ್ಷರ ಭಾರತ್ ಕಾರ್ಯಕ್ರಮದ ಎಲ್ಲಾ ಜಿಲ್ಲೆಗಳಿಗೆ | **10,00,00,000** | **7,50,00,000** | **2,50,00,000** |
| | | ಒಟ್ಟು | | | **10,00,00,000** | **7,50,00,000** | **2,50,00,000** |
| 7 | 2015–16 | ಮೊದಲನೇ ಮತ್ತು ಎರಡನೇ ಹಂತ | ಎಫ್18–1/2014/NLM A-II/ ದಿನಾಂಕ 14.03.2016 | ಸಾಕ್ಷರ ಭಾರತ್ ಕಾರ್ಯಕ್ರಮದ ಎಲ್ಲಾ ಜಿಲ್ಲೆಗಳಿಗೆ | 10,40,00,000 | 7,80,00,000 | 2,60,00,000 |
| | | ಒಟ್ಟು | | | **10,40,00,000** | **7,80,00,000** | **2,60,00,000** |
| 8 | 2015-16 | ಮೊದಲನೇ ಮತ್ತು ಎರಡನೇ ಹಂತ | No.18-1/2014-NLM-II Dated 14.03.2016 | ಸಾಕ್ಷರ ಭಾರತ್ ಕಾರ್ಯಕ್ರಮದ ಎಲ್ಲಾ ಜಿಲ್ಲೆಗಳಿಗೆ | 2,60,00,000 | 0.00 | 2,60,00,000 |
| 9 | 2016-17 | ಮೊದಲನೇ ಮತ್ತು ಎರಡನೇ ಹಂತ | No.18-1/2014-NLM-II Dated 28.07.2016 | ಸಾಕ್ಷರ ಭಾರತ್ ಕಾರ್ಯಕ್ರಮದ ಎಲ್ಲಾ ಜಿಲ್ಲೆಗಳಿಗೆ | 32,24,00,000 | 19,34,40,000 | 12,89,60,000 |
| | | | | ಒಟ್ಟು | **76,24,26,000** | **50,39,59,500** | **25,84,66,500** |
| | | | | ಒಟ್ಟು | **215,15,95,789** | **154,58,36,842** | **60,57,58,947** |

**ಟಿಪ್ಪಣಿ:–** 2017–18ನೇ ಸಾಲಿನ ಆಯವ್ಯಯದಲ್ಲಿ ಸಾಕ್ಷರ ಭಾರತ್ ಕಾರ್ಯಕ್ರಮದ ರಾಜ್ಯದ ಪಾಲಿನ ಅನುದಾನವಾಗಿ ರೂ.750.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದುಸ ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017, ದಿನಾಂಕ:29.05.2017ರಲ್ಲಿ ಹೈದರಾಬಾದ್–ಕರ್ನಾಟಕದ 06 ಜಿಲ್ಲೆಗಳಲ್ಲಿ 6.00 ಲಕ್ಷ ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿಸಲು ರೂ.22.00 ಲಕ್ಷಗಳ ಅಂದಾಜಿಗೆ ಅನುಮೋದನೆ ನೀಡಿ ಸಾಕ್ಷರ ಭಾರತ್ ಕಾರ್ಯಕ್ರಮದಲ್ಲಿ ಉಳಿದ 19.51 ಕೋಟಿ ಹಣವನ್ನು ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊಬಲಗಿನ ಬಳಕೆಗೆ ಮೊದಲು ಉಪಯೋಗಿಸಿಕೊಳ್ಳಲು ನಿರ್ದೇಶಿಸಲಾಗಿದೆ. ಅದರಂತೆ ಆಯವ್ಯಯದಲ್ಲಿ ನಿಗದಿಪಡಿಸಿರುವ ಮೊಬಲಗು ರೂ.750.00 ಲಕ್ಷಗಳನ್ನು 2017–18ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವುದಿಲ್ಲ ಹಾಗೂ ಕೇಂದ್ರ ಸರ್ಕಾರದಿಂದ ಕಾರ್ಯಕ್ರಮಕ್ಕೆ ಬಿಡುಗಡೆಯಾದ ರೂ.520.00ಲಕ್ಷಗಳ ಅನುದಾನವನ್ನು ಕೂಡ ಉಪಯೋಗಿಸಿರುವುದಿಲ್ಲ.

ಸಾಕ್ಷರ ಭಾರತ್ ಕಾರ್ಯಕ್ರಮಕ್ಕೆ ಮೇಲ್ಕಂಡಂತೆ 1, 2 ಮತ್ತು 3ನೇ ಹಂತದ ಕಾರ್ಯಕ್ರಮಕ್ಕೆ ರೂ.215.16 ಕೋಟಿಗಳನ್ನು ಖಜನೆಯಿಂದ ಸೆಳೆದಿದ್ದು, ಉಳಿದ ಬಾಕಿ ಮೊಬಲಗು ಹಾಗೂ ಬಡ್ಡಿ ಸೇರಿ ರೂ.21.02 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, 2017–18ನೇ ಸಾಲಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಯೋಯೋಕ 2017, ದಿನಾಂಕ:29.05.2017, ಹೈದರಾಬಾದ್–ಕರ್ನಾಟಕ ಪ್ರದೇಶದ ಒಟ್ಟು 06 ಜಿಲ್ಲೆಗಳಾದ ಬಳ್ಳಾರಿ, ಬೀದರ್, ಕೊಪ್ಪಳ, ರಾಯಚೂರು, ಕಲಬುರಗಿ, ಮತ್ತು ಯಾದಗಿರಿ ಜಿಲ್ಲೆಗಳು 6.00 ಲಕ್ಷ ಅನಕ್ಷರಸ್ಥರ ಗುರಿಯೊಂದಿಗೆ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನಗೊಳಿಸಲು ಅನುಮತಿ ನೀಡಿದೆ.

**ಪರಿಷ್ಕೃತ ಆಯವ್ಯಯ ಮಂಜೂರಾತಿ**

(ರೂ.ಕೋಟಿಗಳಲ್ಲಿ)

| ವಿವರ | ಮಂಜೂರಾದ ದಿನಾಂಕ | ಅನುದಾನ | ಕೇಂದ್ರದ ಪಾಲು | ರಾಜ್ಯದ ಪಾಲು |
|---|---|---|---|---|

| | | | | |
|---|---|---|---|---|
| ಪರಿಷ್ಕೃತ ಆಯವ್ಯಯ ಮಂಜೂರಾತಿ | 28.07.2016 | 277.00 | 192.00 | 85.05 |

**ಅನುಷ್ಠಾನ ಸಂಸ್ಥೆಗಳು:**

ಕಾರ್ಯಕ್ರಮ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದಲ್ಲಿ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಮತ್ತು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಹಂತಗಳಲ್ಲಿ ಲೋಕ ಶಿಕ್ಷಣ ಸಮಿತಿಗಳನ್ನು ರಚಿಸಲಾಗಿದೆ.

- ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದಿಂದ 2017-18 ನೇ ಸಾಲಿಗೆ 06 ಜಿಲ್ಲಾ ಲೋಕ ಶಿಕ್ಷಣ ಸಮಿತಿ, 31 ತಾಲ್ಲೂಕು ಲೋಕ ಶಿಕ್ಷಣ ಸಮಿತಿ, 999 ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.
- ಕಾರ್ಯಕ್ರಮ ಅನುಷ್ಠಾನಕ್ಕಾಗಿ 01 ರಾಜ್ಯ ಸಂಯೋಜಕರು, 24 ಜಿಲ್ಲಾ ಸಂಯೋಜಕರು, 31 ತಾಲ್ಲೂಕು ಸರ್ಕಾರೇತರ ಸಂಯೋಜಕರು ಹಾಗೂ 1998 ಪ್ರೇರಕರನ್ನು ಗೊತ್ತುಪಡಿಸಿಕೊಳ್ಳಲಾಗಿದ್ದು, ಪ್ರಸ್ತುತ 1 ರಾಜ್ಯ ಸಂಯೋಜಕರು, 16 ಜಿಲ್ಲಾ ಸಂಯೋಜಕರು, 26 ತಾಲ್ಲೂಕು ಸಂಯೋಜಕರು, 1974 ಪ್ರೇರಕರು ಕಾರ್ಯನಿರ್ವಹಿಸುತ್ತಿದ್ದಾರೆ.
- 06 ಜಿಲ್ಲೆಗಳ 999 ಗ್ರಾ.ಪಂಗಳ ಕುಟುಂಬ ಸಮೀಕ್ಷೆ ಪೂರ್ಣಗೊಂಡಿದ್ದು 7.45 ಲಕ್ಷ ಜನ ಅನಕ್ಷರಸ್ಥರನ್ನು ಗುರುತಿಸಲಾಗಿದೆ.
- ನಾಲ್ಕನೇ ಹಂತದ ಕಲಿಕೆಗೆ 662520 ಬಾಳಿಗೆ ಬೆಳಕು ಪ್ರಾಥಮಿಕೆ, 315500 ಲಕ್ಷ ಸಾಕ್ಷರ ದೀವಿಗೆ ಮತ್ತು 62520 ಲಕ್ಷ ಬೋಧಕರ ಕೈಪಿಡಿಗಳನ್ನು ಮುದ್ರಿಸಿ ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗೆ ಸರಬರಾಜು ಮಾಡಲಾಗಿದೆ.

**ಪಠ್ಯಾಧಾರಿತ ತರಬೇತಿ:**

- 189 ಸಂಪನ್ಮೂಲ ವ್ಯಕ್ತಿಗಳು ಮತ್ತು 3974 ಮುಖ್ಯ ತರಬೇತುದಾರರಿಗೆ ಪಠ್ಯಾಧಾರಿತ ತರಬೇತಿ ನೀಡಲಾಗಿದೆ.
- 06 ಜಿಲ್ಲೆಗಳ 24 ಜಿಲ್ಲಾ ಸಂಯೋಜಕರು, 31 ತಾಲ್ಲೂಕು ಸಂಯೋಜಕರುಗಳು ಮತ್ತು 1994 ಪ್ರೇರಕರಿಗೆ ಕಾರ್ಯಕ್ರಮ ಅನುಷ್ಠಾನದ ಆಡಳಿತಾತ್ಮಕ ಮತ್ತು ಪಠ್ಯಾಧಾರಿತ ತರಬೇತಿ ನೀಡಲಾಗಿದೆ.
- 06 ಜಿಲ್ಲೆಗಳಲ್ಲಿ 60000 ಸ್ವಯಂ ಸೇವಕರಿಗೆ ಪಠ್ಯಾಧಾರಿತ ತರಬೇತಿ ನೀಡಿ 60000 ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

**ವಾತಾವರಣ ನಿರ್ಮಾಣ:**

- ಕಾರ್ಯಕ್ರಮದ ಯಶಸ್ವಿಗಾಗಿ ಮತ್ತು ಕಲಿಕಾ ವಾತಾವರಣದ ನಿರ್ಮಾಣದ ಸಲುವಾಗಿ ಪೋಸ್ಟರ್ಸ್, ಬ್ಯಾನರ್ಸ್, ಮಡಿಕೆ ಹಾಳೆಗಳು, ಕರಪತ್ರ, ಸ್ಟಿಕ್ಕರ್ಸ್‌ಗಳನ್ನು ಬಳಕೆ ಮಾಡಲಾಗಿದೆ.
- ಕಲಿಕಾ ವಾತಾವರಣ ನಿರ್ಮಾಣಕ್ಕೆ ಪೂರಕವಾಗಿ ಅಗತ್ಯವಿರುವ ಬೀದಿ ನಾಟಕಗಳ ಸಾಹಿತ್ಯವನ್ನು ರಚಿಸಿ, ಬೀದಿ ನಾಟಕ ನಿರ್ದೇಶಕರಿಗೆ ಮತ್ತು ತಂಡಗಳ ಕಲಾವಿದರಿಗೆ ತರಬೇತಿ ನೀಡಿ ಬೀದಿ ನಾಟಕ ಪ್ರದರ್ಶನ ನಡೆಸಲಾಗಿದೆ. ವಾರ್ತಾ ಮತ್ತು ಪ್ರಚಾರ ಇಲಾಖೆಯ ಹಾಡು ಮತ್ತು ನಾಟಕ ವಿಭಾಗದಿಂದ ಆರು ಜಿಲ್ಲೆಗಳಲ್ಲಿ ಕಲಾವಿದರಿಂದ ದಿನಾಂಕ:29.01.2018 ರಿಂದ 03.02.2018 ರವರೆಗೆ ಕಲಾಜಾಥಾ, ಕಾರ್ಯಕ್ರಮಗಳನ್ನು ನಡೆಸುವ ಸಾಕ್ಷರತಾ ಅರಿವು ಮೂಡಿಸಲಾಗಿದೆ.
- 06 ಜಿಲ್ಲೆಗಳ ಬಹುತೇಕ ಗ್ರಾಮ ಪಂಚಾಯಿತಿ (ಗ್ರಾಮ) ಗಳಲ್ಲಿ ಕಲಾಜಾಥಾ, ಸೈಕಲ್ ಜಾಥಾಗಳನ್ನು ನಡೆಸಲಾಗಿದೆ

**ಪರಿವೀಕ್ಷಣೆ:**

- ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳನ್ನು ಕಾಲಕಾಲಕ್ಕೆ ನಿರ್ದೇಶನಾಲಯದಲ್ಲಿ ಹಾಗೂ ವಿವಿಧ ಜಿಲ್ಲ ಕೇಂದ್ರಗಳಲ್ಲಿ ಮಾಡಲಾಗಿದೆ.

- ಜಿಲ್ಲೆಗಳ ಕಾರ್ಯಕ್ರಮದ ಪರಿವೀಕ್ಷಣೆಗಾಗಿ ನಿರ್ದೇಶನಾಲಯದಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿ ಪರಿವೀಕ್ಷಣೆ ನಡೆಸಲಾಗಿದೆ.
- ನೋಡಲ್ ಅಧಿಕಾರಿಗಳು ನೀಡುವ ಪರಿಶೀಲನಾ ವರದಿಗಳನ್ನು ಆಧರಿಸಿ ಜಿಲ್ಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಗಿದೆ.

**ನವಸಾಕ್ಷರರ ಕಲಿಕಾ ಮೌಲ್ಯಮಾಪನ/ಪರೀಕ್ಷೆ**

ಕರ್ನಾಟಕ ರಾಜ್ಯದಲ್ಲಿ ಸಾಕ್ಷರ ಭಾರತ್ ಮತ್ತು ಇತರೆ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಓದು–ಬರಹ ಕಲಿತು ನವಸಾಕ್ಷರರಾದವರ ಕಲಿಕಾ ಸಾಮರ್ಥ್ಯ ಅಳೆಯಲು ಪರೀಕ್ಷಾ ಮಾದರಿಯಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲ್ ಇವರ ಸಹಯೋಗದಲ್ಲಿ 2017–18ನೇ ಸಾಲಿನಲ್ಲಿ ಆಗಸ್ಟ್ ಮತ್ತು ಮಾರ್ಚ್ ಮಾಹೆಯಲ್ಲಿ ಮೌಲ್ಯಮಾಪನ/ಪರೀಕ್ಷೆ ನಡೆಸಲಾಗಿದೆ.

ದಿನಾಂಕ 25.08.2017 ರಂದು ರಾಜ್ಯದ 06 ಜಿಲ್ಲೆಗಳ 999 ಗ್ರಾಮ ಪಂಚಾಯಿತಿಗಳಲ್ಲಿ ನವಸಾಕ್ಷರರ ಕಲಿಕಾ ಮೌಲ್ಯಮಾಪನ ಪರೀಕ್ಷೆಯನ್ನು ನಡೆಸಲಾಗಿದ್ದು, 186397 ನವಸಾಕ್ಷರರು ಪರೀಕ್ಷೆಗೆ ಹಾಜರಾಗಿದ್ದು, 155917 ನವಸಾಕ್ಷರರು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಉತ್ತೀರ್ಣರಾದವರಿಗೆ ಎನ್.ಎಲ್.ಎಂ. ಹಾಗೂ ಎನ್.ಐ.ಓ.ಎಸ್ ಇವರ ವತಿಯಿಂದ ಪ್ರಮಾಣ ಪತ್ರ ನೀಡಲಾಗಿದೆ.

ದಿನಾಂಕ 25.03.2018 ರಂದು ರಾಜ್ಯದ 06 ಜಿಲ್ಲೆಗಳ 999 ಗ್ರಾಮ ಪಂಚಾಯಿತಿಗಳಲ್ಲಿ ನವಸಾಕ್ಷರರ ಕಲಿಕಾ ಮೌಲ್ಯಮಾಪನ ಪರೀಕ್ಷೆಯನ್ನು ನಡೆಸಲಾಗಿದ್ದು, 572502 ನವಸಾಕ್ಷರರು ಪರೀಕ್ಷೆಗೆ ಹಾಜರಾಗಿದ್ದು, ಫಲಿತಾಂಶ ನಿರೀಕ್ಷಿಸಲಾಗಿದೆ.

**ಸಾಕ್ಷರ ಭಾರತ್ ವೆಬ್‌ಪೋರ್ಟಲ್‌ಗೆ ಅಳವಡಿಸುವಿಕೆ**

ನಿಕ್ (NIC) ನವರು ಸಿದ್ದಪಡಿಸಿರುವ ಸಾಕ್ಷರ ಭಾರತ್ ವೆಬ್‌ಪೋರ್ಟಲ್‌ಗೆ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, 16 ಜಿಲ್ಲೆಗಳ, 97 ತಾಲ್ಲೂಕುಗಳ ಮತ್ತು 3170 ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳ ರಚನೆಯನ್ನು ಅಳವಡಿಸಲಾಗಿದೆ. ಅದೇ ರೀತಿ 84 ಜಿಲ್ಲಾ ಸಂಯೋಜಕರು, 97 ತಾಲ್ಲೂಕು ಸಂಯೋಜಕರು ಮತ್ತು 6340 ಪ್ರೇರಕರ ವಿವರವನ್ನು ಅಳವಡಿಸಲಾಗಿದೆ. ಸಾಕ್ಷರ ಭಾರತ್ ಜಿಲ್ಲೆಗಳ ಗ್ರಾಮೀಣ ಪ್ರದೇಶದ ಎಲ್ಲಾ ಕುಟುಂಬಗಳ ಸಮೀಕ್ಷೆ ನಡೆಸಿರುವ ಮಾಹಿತಿ ಸಮೀಕ್ಷೆಯಿಂದ ಗುರುತಿಸಿರುವ ಅನಕ್ಷರಸ್ಥರು ಮತ್ತು ಸ್ವಯಂ ಸೇವಕರ ಮಾಹಿತಿಗಳನ್ನು ಗ್ರಾಮ ಪಂಚಾಯಿತಿವಾರು ಆನ್‌ಲೈನ್‌ನಲ್ಲಿ ಸಾಕ್ಷರ ಭಾರತ್ ವೆಬ್‌ಪೋರ್ಟಲ್‌ಗೆ ಅಳವಡಿಸಲಾಗುತ್ತಿದೆ. ಇದರಿಂದ ವಿಶ್ವದಾದ್ಯಂತ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.

**ಅನುದಾನ – ಹಣಕಾಸು ನಿರ್ವಹಣೆ ವ್ಯವಸ್ಥೆ** (Fund Accounting Management System)

ಸಾಕ್ಷರ ಭಾರತ್ ಕಾರ್ಯಕ್ರಮದಡಿಯಲ್ಲಿ ವೆಬ್‌ಪೋರ್ಟಲ್ ಆಧಾರಿತ ವ್ಯವಸ್ಥೆಯನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ, ಸಿಡಾಕ್ (**CDAC**) ಸಂಸ್ಥೆಯ ಸಹಯೋಗದಲ್ಲಿ ಅನುದಾನ ಹಣಕಾಸು ನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿರುತ್ತಾರೆ. ಕಾರ್ಯಕ್ರಮ ಅನುಷ್ಠಾನಕ್ಕೆ ಮುಖ್ಯ ಖಾತೆ ಮತ್ತು ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, 17 ಜಿಲ್ಲೆಗಳ, 107 ತಾಲ್ಲೂಕುಗಳ ಮತ್ತು 3507 ಗ್ರಾಮ ಪಂಚಾಯಿತಿ ಲೋಕ ಶಿಕ್ಷಣ ಸಮಿತಿಗಳ ಸಬ್‌ಸಿಡಿಯರಿ ಖಾತೆಗಳ ವ್ಯವಹಾರವನ್ನು ಸಾಕ್ಷರ ಭಾರತ್ ಕಾರ್ಯಕ್ರಮದ ಸೀಡಾಕ್ (**CDAC**) ವೆಬ್‌ಪೋರ್ಟಲ್‌ಗೆ ಅಳವಡಿಸುವುದರ ಮೂಲಕ ಪಾರದರ್ಶಕವಾಗಿ ಮತ್ತು ಜವಾಬ್ದಾರಿಯುತವಾಗಿ ಅನುದಾನದ ಬಳಕೆಯನ್ನು ಪರಿಣಾಮಕಾರಿಯಾಗಿ ಪರಿವೀಕ್ಷಣೆ ಮಾಡಲಾಗುತ್ತಿದೆ.

**ಮಾದರಿ ಲೋಕ ಶಿಕ್ಷಣ ಕೇಂದ್ರ**

ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನದಲ್ಲಿರುವ 06 ಜಿಲ್ಲೆಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಲೋಕ ಶಿಕ್ಷಣ ಕೇಂದ್ರ ತೆರೆಯಲಾಗಿದ್ದು, ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಮೂಲಕ ಪ್ರಸ್ತುತ ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯ ಲಿಮಿಟೆಡ್, ನವದೆಹಲಿ ಇವರು 40 ಮಾದರಿ ಲೋಕ ಶಿಕ್ಷಣ ಕೇಂದ್ರಗಳನ್ನಾಗಿಸಲು ರೂ. 115.00 ಲಕ್ಷ ಮತ್ತು ಪವರ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್, ನವದೆಹಲಿ ಇವರು 35 ಮಾದರಿ ಲೋಕ ಶಿಕ್ಷಣ ಕೇಂದ್ರಗಳನ್ನಾಗಿಸಲು ರೂ. 87.50 ಲಕ್ಷಗಳನ್ನು ಬಿಡುಗಡೆ

ಮಾಡಿದ್ದು 75 ಗ್ರಾಮ ಲೋಕ ಶಿಕ್ಷಣ ಕೇಂದ್ರಗಳನ್ನು ಮಾದರಿ ಲೋಕ ಶಿಕ್ಷಣ ಕೇಂದ್ರಗಳನ್ನಾಗಿಸಲು ಮಾದರಿ ಲೋಕ ಶಿಕ್ಷಣ ಕೇಂದ್ರಗಳಿಗೆ ಕಂಪ್ಯೂಟರ್ ಮತ್ತು ಸಂಬಂಧಿಸಿದ ಉಪಕರಣಗಳು, ರೀಡಿಂಗ್ ಟೇಬಲ್ ಮತ್ತು ಖುರ್ಚಿಗಳು, ಪುಸ್ತಕದ ಅಲ್ಮೇರ, ರ್‍ಯಾಕ್, ಮೇಜು, ಖುರ್ಚಿ, ಟಿ.ವಿ., ಮೈಕ್ ಸೆಟ್, ಡಿ.ವಿ.ಡಿ. ಪ್ಲೇಯರ್, ಫ್ಯಾನ್, ಜಮಖಾನ, ಜನರೇಟರ್, ಉಪಕರಣಗಳು ಮತ್ತು ಇತರೆ ಉಪಕರಣಗಳನ್ನು ಕೇಂದ್ರಗಳಿಗೆ ಸರಬರಾಜು ಮಾಡಿ ಮಾದರಿ ಲೋಕ ಶಿಕ್ಷಣ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ ಹಾಗೂ ಇಂಟರ್‌ನೆಟ್ ಮತ್ತು ಕೇಬಲ್ ವ್ಯವಸ್ಥೆ ಮಾಡಲಾಗಿದ್ದು ಪ್ರಸ್ತುತ ರಾಜ್ಯದಲ್ಲಿ 75 ಮಾದರಿ ಲೋಕ ಶಿಕ್ಷಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

**<u>ಇತರೆ ವಿವರಗಳು:</u>**

**1. <u>ದೂರು ನಿವಾರಣಾ ವಿಭಾಗ:</u>**

ಲೋಕ ಶಿಕ್ಷಣ ನಿರ್ದೇಶನಾಲಯದಲ್ಲಿ ದೂರು ನಿವಾರಣಾ ವಿಭಾಗವು ಕರ್ತವ್ಯ ನಿರ್ವಹಿಸುತ್ತಿದ್ದು. ಪ್ರತಿ ಮಾಹೆಯ ಮೊದಲನೆ ಶನಿವಾರ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.

**2. <u>ಇ–ಆಡಳಿತ ವಿಭಾಗ:</u>**

ಲೋಕ ಶಿಕ್ಷಣ ನಿರ್ದೇಶನಾಲಯದಲ್ಲಿ ಇ–ಆಡಳಿತ ವಿಭಾಗ ಕರ್ತವ್ಯ ನಿರ್ವಹಿಸುತ್ತಿದ್ದು ಎಲ್ಲಾ ಜಿಲ್ಲೆಗಳಿಂದ ವಿವಿಧ ಕಾರ್ಯಕ್ರಮದ ಮಾಹಿತಿಗಳನ್ನು ಇಂಟರ್ ನೆಟ್ ಮುಖಾಂತರ ತರಿಸಿ ವಿಷಯಗಳನ್ನು ಶೀಘ್ರ ವಿಲೇವಾರಿ ಮಾಡಲಾಗುತ್ತಿದೆ Website ಅಭಿವೃದ್ಧಿಗೊಳಿಸಿ ಇಂದೀಕರಿಸಲಾಗುತ್ತಿದೆ. ಎಲ್ಲಾ ಜಿಲ್ಲೆಗಳಿಗೆ BSNL Broad Band Internet ಸೇವೆ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಜಿಲ್ಲಾ ಲೋಕ ಶಿಕ್ಷಣ ಸಮಿತಿ/ ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಹಾಗೂ ನಿರ್ದೇಶನಾಲಯಕ್ಕೆ E-mail ವಿಳಾಸಗಳನ್ನು ಸಿದ್ಧಪಡಿಸಿ ವರದಿಗಳನ್ನು E-mail ಮತ್ತು ಫ್ಯಾಕ್ಸ್ ಮೂಲಕ ನೀಡಲಾಗುತ್ತಿದೆ.

**3. <u>ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ:</u>**

ಕರ್ನಾಟಕ ರಾಜ್ಯ ಸಾಕ್ಷರತಾ ಮಿಶನ್ ಪ್ರಾಧಿಕಾರವು ಒಂದು ನೊಂದಾಯಿತ, ಸ್ವಾಯತ್ತ ಸಂಸ್ಥೆಯಾಗಿದ್ದು ರಾಜ್ಯದಲ್ಲಿ ಸಾಕ್ಷರತಾ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಿ, ಮೇಲುಸ್ತುವಾರಿ ಮಾಡುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಪ್ರಾಧಿಕಾರದ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದು, ಇಲಾಖೆ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರು ಉಪಾಧ್ಯಕ್ಷರಾಗಿರುತ್ತಾರೆ. ಎರಡೂ ಸಮಿತಿಗಳಿಗೆ ಲೋಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

4. **<u>ಮಾಹಿತಿ ಹಕ್ಕು ಅಧಿನಿಯಮ</u>:**

ಮಾಹಿತಿ ಹಕ್ಕು ಅಧಿನಿಯಮ 2005 ಕ್ಕೆ ಸಂಬಂಧಿಸಿದಂತೆ ಇಲಾಖೆಯ ಮಾಹಿತಿಯನ್ನು 4(1) (ಎ), 4 (1) (ಬಿ)ಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಇಲಾಖೆಯ ವೆಬ್ ಪೋರ್ಟಲ್‌ಗೆ ಅಳವಡಿಸಲಾಗಿದೆ.